# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಹೆಚ್.ಎ.ಎಲ್ ಏರ್‌ಪೋರ್ಟ್ ಉಪವಿಭಾಗ ಮಹದೇವಪುರ ವಲಯ, ಬೆಂಗಳೂರು

ಸಂಖ್ಯೆ.ಬಿಬಿಎಂಪಿ/ಸ.ಕಾ.ಅ/ಹೆಚ್.ಎ.ಎಲ್/ಪಿಆರ್/ 07/2022-23 ದಿನಾಂಕ: 07-12-2022

### 07 ನೇ ವಾರ್ಡ್ ಸಮಿತಿ ಸಭೆಯ ನಡಾವಳಿಗಳು.

ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮಾನ್ಯ ಆಯುಕ್ತರು ಕಛೇರಿ ಆದೇಶ ಸಂ: ಬಿ12(5)/ಪಿಆರ್/35/2020-21 ದಿನಾಂಕ:04/04/2022, ಆದೇಶದಂತೆ ಜಂಟಿ ಆಯುಕ್ತರು ಮಹದೇವಪುರ ವಲಯ ರವರ ಕಛೇರಿ ಆದೇಶ ಸಂ:ಜಂಆ/ಮವ/ಪಿ.ಎಸ್/ 1651/2022-23 ದಿನಾಂಕ: 18-07-2022 ರಂತೆ ಶ್ರೀ.ಸೋಮಯ್ಯ.ಜಿ.ಡಿ , ಸಹಾಯಕ ಅಭಿಯಂತರು (ವಾರ್ಡ್ ನಂ-91 .ಎ.ನಾರಾಯಣಪುರ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರನ್ನು ವಾರ್ಡ್ ನಂ-91 .ಎ.ನಾರಾಯಣಪುರದ ವಾರ್ಡ್ ಸಮಿತಿ ಸಭೆಯ ನೋಡಲ್ ಅಧಿಕಾರಿಯನ್ನಾಗಿ ನೇಮಿಸಿರುತ್ತಾರೆ. ಅದರಂತೆ ದಿನಾಂಕ:23-09-2022ರಂದು ನೋಡಲ್ ಅಧಿಕಾರಿಯಾದ ಶ್ರೀ.ಸೋಮಯ್ಯ.ಜಿ.ಡಿ, ಸಹಾಯಕ ಅಭಿಯಂತರು (ವಾರ್ಡ್ ನಂ-91 ಎ.ನಾರಾಯಣಪುರ) ರವರ ಅದ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡಾವಳಿಗಳು ಈ ಕೆಳಕಂಡಂತೆ ಇರುತ್ತದೆ.

**ಉಪಸ್ಥಿತರು:**

| ಕ್ರ.ಸಂ | ಹೆಸರು | ಹುದ್ದೆ |
|---|---|---|
| | | ಅಧಿಕಾರಿಗಳು |
| 1 | ಶ್ರೀ.ಜಿ.ಡಿ.ಸೋಮಯ್ಯ | ವಾರ್ಡ್ ಸಮಿತಿಯ ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು ವಾರ್ಡ್ ನಂ.56 ಎ.ನಾರಾಯಣಪುರ |
| 2 | ಶ್ರೀ.ಎನ್,ಕೃಷ್ಣಮೂರ್ತಿ | ಸಹಾಯಕ ಕಂದಾಯ ಅಧಿಕಾರಿಗಳು,ಹೆಚ್.ಎ.ಎಲ್ ಏರ್‌ಪೋರ್ಟ್ ಉಪ ವಿಭಾಗ |
| 3 | ಶ್ರೀ. ಪ್ರಭಾಕರನ್ | ಕಂದಾಯ ಪರಿವೀಕ್ಷಕರು |
| 4 | ಶ್ರೀ. ಮಹೇಶ್.ಎಸ್ | ಸಹಾಯಕ ಅಭಿಯಂತರರು( ಬೆಸ್ಕಾಂ) |
| 5 | ಶ್ರೀ. ಅಶ್ವತ್ ನಾರಾಯಣ | ಪಶು ಸಂಗೋಪನಾಧಿಕಾರಿಗಳು, ಕೆ.ಆರ್.ಪುರ |
| 6 | ಶ್ರೀ. ಎಮ್. ಲೋಕೇಶ್ | ಬಿ.ಡಬ್ಲೂ.ಎಸ್.ಎಸ್.ಬಿ ಯ ಕೆಲಸದ ಪರಿವೀಕ್ಷಕರು |
| 7 | ಶ್ರೀಮತಿ.ಮಂಜುಳ | ಹಿರಿಯ ಆರೋಗ್ಯ ಅಧಿಕಾರಿ |
| 8 | ಶ್ರೀಮತಿ.ಸುವರ್ಣ ಹೆಚ್.ಸಿ | ಕಿರಿಯ ಆರೋಗ್ಯ ನಿರೀಕ್ಷಕರು |
| 9 | ಶ್ರೀ. ಬಿ.ಕೆ.ಲಕ್ಷ್ಮಣ | ಟ್ರಾಫಿಕ್ ಪೋಲೀಸ್, ಕೆ.ಆರ್.ಪುರ |
| 10 | ಶ್ರೀ.ಅಖಿಲ್ | ಡೇಟಾ ಎಂಟ್ರಿ ಆಪರೇಟರ್, ಕಂದಾಯ ಇಲಾಖೆ. |
| 11 | ಶ್ರೀ.ಜಾನ್ ವಿಲಿಯಂ | ವಾರ್ಡ್ ಮಾರ್ಷಲ್ ಹೆಡ್ |
| | | ಸಂಘದ ಪದಾಧಿಕಾರಿಗಳು ಹಾಗೂ ಸಾರ್ವಜನಿಕರು |
| 12 | ಶ್ರೀ.ಸುರೇಶ್.ವಿ | ಎ-ನಾರಾಯಣಪುರ |
| 13 | ಶ್ರೀ.ರಾಮುಲು ರೆಡ್ಡಿ | ಎ-ನಾರಾಯಣಪುರ |
| 14 | ಶ್ರೀ.ಸುನಿಲ್ | ಎ-ನಾರಾಯಣಪುರ |
| 15 | ಶ್ರೀ. ಸುಂದರ್ ಶ್ರೀನಿವಾಸನ್ | ಎ-ನಾರಾಯಣಪುರ |
| 16 | ಶ್ರೀಮತಿ. ಸುಲೇಖಾ | ಎ-ನಾರಾಯಣಪುರ |
| 17 | ಶ್ರೀ. ವಸಂತ್ | ಎ-ನಾರಾಯಣಪುರ |
| 18 | ಶ್ರೀ. ಮೋಹನ್ ರಾಜ್ | ಎ-ನಾರಾಯಣಪುರ |
| 19 | ಶ್ರೀ.ಗಂಗಮಣಿ | ಎ-ನಾರಾಯಣಪುರ |

**ನಡಾವಳಿ 1. ಕೋವಿಡ್-19ರ ಸಾಂಕ್ರಮಿಕ ರೋಗಕ್ಕೆ ಸಂಬಂಧಿಸಿದಂತೆ, ಸೊಂಕು ಹರಡುವುದನ್ನು ತಡೆಗಟ್ಟುವ ಸಂಬಂಧ ತೆಗೆದುಕೊಳ್ಳಬೇಕಾದ ಮುಂಜಾಗ್ರತ ಕ್ರಮಗಳ ಬಗ್ಗೆ.**

ಆರೋಗ್ಯಾಧಿಕಾರಿಗಳು ಮಾತನಾಡಿ ಎ.ನಾರಾಯಣಪುರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯರು ಇಲ್ಲದ ಕಾರಣ ವೈದ್ಯಾಧಿಕಾರಿಯನ್ನು ನಿಯೋಜಿಸಲು ಸಂಬಂಧಪಟ್ಟ ಇಲಾಖೆಗೆ ಪತ್ರ ಬರೆಯಲು ಹಾಗೂ ಎ.ನಾರಾಯಣಪುರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಬಿ.ಪಿ ಮತ್ತು ಶುಗರ್ ತಪಾಸಣೆ ಯಂತ್ರವು ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲವೆಂದು ತಿಳಿಸಿರುತ್ತಾರೆ.

**ನಡಾವಳಿ 2. ವಾರ್ಡ್ ವ್ಯಾಪ್ತಿಯಲ್ಲಿ ಕುಡಿಯುವ ನೀರು ಹಾಗೂ ಒಳಚರಂಡಿಗಳ ಸಂಬಂಧಿಸಿದ ವಿಷಯಗಳ ಬಗ್ಗೆ.**

ವಾರ್ಡ್ ವ್ಯಾಪ್ತಿಯಲ್ಲಿ ಸಾರ್ವಜನಿಕರು ಮಾತಾನಾಡಿ ಎ.ನಾರಾಯಣಪುರ ಮುಖ್ಯರಸ್ತೆಯಲ್ಲಿ ನಡೆಯುತ್ತಿರುವ ಒಳಚರಂಡಿ ಕಾಮಗಾರಿಯನ್ನು ಶ್ರೀಘ್ರವಾಗಿ ಪೂರ್ಣಗೊಳಿಸಬೇಕೆಂದು ಹಾಗೂ ಪೈ ಬಡಾವಣೆ 1ನೇ ಮುಖ್ಯರಸ್ತೆ ಒಳಚರಂಡಿಯ ಕಾಮಗಾರಿ ಮಾಡಲು ರಸ್ತೆ ತುಂಡರಿಸಿರುವ ಭಾಗಗಳಿಗೆ ವೆಟ್ ಮಿಕ್ಸ್ ತುಂಬಬೇಕೆಂದು ಸಾರ್ವಜನಿಕರು ಕೋರಿರುತ್ತಾರೆ. ವಾರ್ಡ್ ವ್ಯಾಪ್ತಿಯಲ್ಲಿ ಪ್ರಸ್ತುತ ಕುಡಿಯುವ ನೀರನ್ನು ಶುಕ್ರವಾರ ಮತ್ತು ಭಾನುವಾರದಂದು ಬಿಡುತ್ತಿದ್ದು ಇದರಿಂದ ಉಳಿದ ದಿನಗಳಲ್ಲಿ ನೀರಿನ ಸಮಸ್ಯೆ ಹೆಚ್ಚಾಗುತ್ತಿರುವ ಕಾರಣ 2 ದಿನಕ್ಕೆ ಒಮ್ಮೆ ನೀರಿನ ಬಿಡಬೇಕೆಂದು ಮತ್ತು ನೇತ್ರಾವತಿ ರಸ್ತೆಯಲ್ಲಿ ವಾಲ್ವ್‌ಹಾಕಿ ಅಡ್ಡರಸ್ತೆಗಳಿಗೆ ಲೀಕ್ ಮಾಡಬೇಕೆಂದು ಎಂದು ಸಾರ್ವಜನಿಕರು ಮನವಿ ಮಾಡಿಕೊಂಡಿರುತ್ತಾರೆ. ಸಭೆಯಲ್ಲಿ ಗೈರಾಜರಾಗಿರುವ ಸಹಾಯಕ ಅಭಿಯಂತರರಿಗೆ ಸೂಚಿಸಲು ತಿರ್ಮಾನಿಸಲಾಯಿತು ಹಾಗೂ ಕಾರ್ಯಪಾಲಕ ಅಭಿಯಂತರರಿಗೆ ಮುಂದಿನ ಸಭೆಗೆ ಹಾಜರಾಗಲು ತಿರ್ಮಾನಿಸಲಾಯಿತು.

ಕ್ರಮ: ಬಿ.ಡಬ್ಲ್ಯೂ.ಎಸ್.ಎಸ್.ಬಿ ಸಹಾಯಕ ಅಭಿಯಂತರರು.

**ನಡಾವಳಿ 3. ವಾರ್ಡ್‌ನಲ್ಲಿ ಘನತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿ ಬಗ್ಗೆ.**

ವಾರ್ಡ್ ವ್ಯಾಪ್ತಿಯಲ್ಲಿ ಬ್ಲಾಕ್ ಸ್ಪಟ್‌ಗಳು ಹೆಚ್ಚಾಗುತ್ತಿದ್ದು, ಆ ಜಾಗಗಳಿಗೆ ಕಸದಗಾಡಿಗಳನ್ನು ಬೇಗ ಕಳುಹಿಸಿಕೊಡಬೇಕೆಂದು ಮತ್ತು ವಾರ್ಡ್ ವ್ಯಾಪ್ತಿಯಲ್ಲಿ ಪ್ರಮುಖ ಬೀದಿಗಳಲ್ಲಿ ಪೌರಕಾರ್ಮಿಕರ ಹಾಜರಾತಿ ಪುಸ್ತಕವನ್ನು ಇಟ್ಟು ಸಾರ್ವಜನಿಕರಿಂದ ಸಹಿ ಮಾಡಿಸಬೇಕೆಂದು ತಿಳಿಸಿರುತ್ತಾರೆ, ಉದಯನಗರ ಮುಖ್ಯರಸ್ತೆ ಎವರ್‌ಗ್ರೀನ್ ಸ್ಟ್ರೀಟ್ ಹಾಗೂ ಆರ್.ಆರ್.ಬೇಕರಿ ಹತ್ತಿರ ರಸ್ತೆ ಸ್ವಚ್ಚ ಮಾಡಲು ಪೌರಕಾರ್ಮಿಕರು ಬರುತ್ತಿಲ್ಲವೆಂದು ಸಾರ್ವಜನಿಕರು ತಿಳಿಸಿರುತ್ತಾರೆ.

ಕ್ರಮ: ಆರೋಗ್ಯಾಧಿಕಾರಿಗಳು.

**ನಡಾವಳಿ 4.ವಾರ್ಡ್‌ನ ವಿವಿಧ ಕಾಮಗಾರಿಗಳ ಅಭಿವೃದ್ದಿ ಕಾರ್ಯಗಳ ಬಗ್ಗೆ .**

ವಾರ್ಡ್‌ನ ಅಭಿವೃದ್ದಿ ಕಾಮಗಾರಿಗಳ ಬಗ್ಗೆ ಚರ್ಚಿಸಲಾಗಿದ್ದು.ವಾರ್ಡ್ ವ್ಯಾಪ್ತಿಯ ನೇತ್ರಾವತಿ, ಮೈತ್ರಿ ಸ್ಕೂಲ್ ರಸ್ತೆಗಳ ಕಾಮಗಾರಿಯನ್ನು ಪ್ರಾರಂಭಿಸುವಂತೆ ಸಾರ್ವಜನಿಕರು ಒತ್ತಾಯಿಸಿದರು, ಅದರಂತೆ ಸಾರ್ವಜನಿಕರ ಸಮಸ್ಯೆಗಳನ್ನು ಬಗೆಹರಿಸುವಂತೆ ಸಂಬಂಧಪಟ್ಟ ಅಭಿಯಂತರರಿಗೆ ಸೂಚಿಸಲಾಯಿತು.

ಕ್ರಮ: ಸಹಾಯಕ ಅಭಿಯಂತರರು ವಾರ್ಡ್ 91

**ನಡಾವಳಿ 5.ಬೀದಿ ದೀಪಗಳ ನಿರ್ವಹಣೆ ಬಗ್ಗೆ.**

ವಾರ್ಡ್ ವ್ಯಾಪ್ತಿಯಲ್ಲಿ ಎಲ್.ಇ.ಡಿ ಬಲ್ಪ್‌ಗಳ ಬೆಳಕು ಸರಿಯಾದ ಪ್ರಮಾಣದಲ್ಲಿ ಬೀಳದಿರುವ ಕಾರಣ ಕಂಬಗಳನ್ನು ಎತ್ತರವನ್ನು ಹೆಚ್ಚಿಸಬೇಕೆಂದು ಮತ್ತು ವಾರ್ಡ್ ವ್ಯಾಪ್ತಿಯ ಎಲ್ಲಾ ಬೀದಿ ದೀಪಗಳ ಆಟೋಮೆಟಿಕ್ ಆನ್ ಆಡ್ ಆಫ್ ಟೈಮರ್‌ನ್ನು ಅಳವಡಿಸಲು ಕೋರಿರುತ್ತಾರೆ, ಅದರಂತೆ ಕೊಡಲೇ ಕ್ರಮ ವಹಿಸಬೇಕೆಂದು ಸಂಬಂಧಿಸಿದ ಅಭಿಯಂತರರಿಗೆ ತಿಳಿಸಲು ತೀರ್ಮಾನಿಸಲಾಯಿತು.

**ನಡಾವಳಿ 6. ವಿದ್ಯುತ್ ಸರಬರಾಜು(ಬೆಸ್ಕಾಂ)ಗೆ ಸಂಬಂಧಿಸಿದ ವಿಷಯದ ಬಗ್ಗೆ.**

ವಾರ್ಡ್ ವ್ಯಾಪ್ತಿಯಲ್ಲಿ ಸಾಕಮ್ಮ ಬಡಾವಣೆ, ಆಂಧ್ರಕಾಲೋನಿ ಮುಖ್ಯರಸ್ತೆಗಳಲ್ಲಿ ಬೀದಿದೀಪಗಳು ಸರಿಯಾಗಿ ಉರಿಯುತ್ತಿಲ್ಲವೆಂದುಸಾರ್ವಜನಿಕರು ಕೋರಿರುತ್ತಾರೆ. ಅದರಂತೆ ಕೊಡಲೇ ಕ್ರಮ ವಹಿಸಬೇಕೆಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಲಾಯಿತು

ಕ್ರಮ: ಸಹಾಯಕ ಅಭಿಯಂತರರು (ಬೆಸ್ಕಾಂ)

**ನಡಾವಳಿ 7. ಕಂದಾಯ ಇಲಾಖೆಗೆ ಸಂಬಂದಿಸಿದ ವಿಷಯಗಳ ಬಗ್ಗೆ.**

ವಾರ್ಡ್ ವ್ಯಾಪ್ತಿಯಲ್ಲಿ ಮಾಜಿ ಪಾಲಿಕೆ ಸದಸ್ಯರು ಮಾತಾನಾಡಿ ಮುಂದಿನ ವಾರ್ಡ್ ಸಮಿತಿ ಸಭೆಗೆ ಎ.ನಾರಾಯಣಪುರ ವಾರ್ಡ್‌ನಲ್ಲಿ ಇದುವರೆಗೂ ಮಾಡಿರುವ ಸಂಪೂರ್ಣ ಖಾತಾ ದಾಖಲೆಗಳನ್ನು ನೀಡಬೇಕೆಂದು ಮತ್ತು ವಾರ್ಡ್ ಪ್ರಮುಖ ಪ್ರದೇಶಗಳಲ್ಲಿ ಕಂದಾಯ ವಸೂಲಾತಿ ಅಭಿಯಾನ ನಡೆಸುವಂತೆ ಸಹಾಯಕ ಕಂದಾಯ ಅಧಿಕಾರಿಗಳಿಗೆ ತಿಳಿಸಿರುತ್ತಾರೆ.

ಚುನಾವಣೆಯ ವಿಷಯವಾಗಿ ಮನೆ ಮನೆ ಸಮೀಕ್ಷೆ ಕಾರ್ಯವು ಪ್ರಗತಿಯಲ್ಲಿದ್ದು ಒಂದು ವೇಳೆ ಮತದಾರರ ಪಟ್ಟಿಯಲ್ಲಿ ಹೆಸರುಗಳಿಲಿದಿದ್ದಲ್ಲಿ ಅಥಾವ ಯಾವುದೇ ತಿದ್ದುಪಡಿ ಅಗತ್ಯವಿದ್ದಲ್ಲಿ ಆನ್‌ಲೈನ್ ಮುಖೇನ ಅಥಾವ ಆಫ್‌ಲೈನ್ ಮುಖೇನ ನಿಗಧಿ ನಮೂನೆಗಳಲ್ಲಿ ಸಂಬಂಧಪಟ್ಟ ಮತದಾರರ ನೊಂದಣಾಧಿಕಾರಿಗಳಿಗೆ ಬಿ.ಎಲ್.ಓ.ಗಳ ಮುಖೇನ ಸಲ್ಲಿಸಬಹುದಾಗಿದೆ ಎಂದು ತಿಳಿಸಿರುತ್ತಾರೆ.

ನೋಡಲ್ ಅಧಿಕಾರಿ ಹಾಗೂ ಸದಸ್ಯ ಕಾರ್ಯದರ್ಶಿ
ಸಹಾಯಕ ಅಭಿಯಂತರರು ವಾರ್ಡ್ ನಂ.91
ಎ.ನಾರಾಯಣಪುರ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಪ್ರತಿಯನ್ನು:-

1. ಮಾನ್ಯ ಜಂಟಿ ಆಯುಕ್ತರು, ಮಹದೇವಪುರ ವಲಯ ರವರ ಮಾಹಿತಿಗಾಗಿ ರವಾನಿಸಿದೆ.
2. ಮುಖ್ಯ ಅಭಿಯಂತರರು, ಮಹದೇವಪುರ ವಲಯ ರವರ ಮಾಹಿತಿಗಾಗಿ ರವಾನಿಸಿದೆ.
3. ಕಛೇರಿ ಪ್ರತಿ.